ಕರ್ನಾಟಕ ಸರ್ಕಾರ

ಫೆಬ್ರವರಿ 5, 2018

# ಪ್ರಧಾನಿ ಅವರಿಂದ ರಾಜ್ಯ ಸರ್ಕಾರದ ಮೇಲೆ ಆರೋಪಗಳ ಸುರಿಮಳೆ : ಮುಖ್ಯಮಂತ್ರಿ ತೀವ್ರ ಖಂಡನೆ

**ಬೆಂಗಳೂರು, ಫೆಬ್ರವರಿ 5:**

ಭಾರತೀಯ ಜನತಾ ಪಕ್ಷವು ನಗರದ ಅರಮನೆ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಪರಿವರ್ತನಾ ರ್‍ಯಾಲಿಯ ಸಮಾರೋಪದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಜ್ಯ ಸರ್ಕಾರದ ಮೇಲೆ ಆರೋಪಗಳ ಸುರಿಮಳೆಗರೆದಿರುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಇಂದು ತೀವ್ರವಾಗಿ ಖಂಡಿಸಿದ್ದಾರೆ.

ಪರಿವರ್ತನಾ ರ್‍ಯಾಲಿಯ ಸಮಾರೋಪದಲ್ಲಿ ನರೇಂದ್ರ ಮೋದಿ ಅವರು ಸುಳ್ಳಿನ ಕಂತೆಯನ್ನೇ ಬಿಚ್ಚಿಟ್ಟಿದ್ದಾರೆ. ಮೋದಿ ಅವರು ದೇಶದ ಪ್ರಧಾನಿ ಆಗಿ ಮಾತನಾಡಲಿಲ್ಲ ಬದಲಾಗಿ ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷ ಬಿ. ಎಸ್. ಯಡಿಯೂರಪ್ಪ ಅವರ ಭಾಷಣದ ಪುನರಾವರ್ತನೆ ಮಾಡಿ ರಾಜ್ಯ ಸರ್ಕಾರದ ಮೇಲೆ ಆಧಾರರಹಿತ ಹೇಳಿಕೆಗಳ ನೀಡಿ ಬೇಜವಾಬ್ದಾರಿ ಆರೋಪ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

## ಕಮೀಷನ್ ಸರ್ಕಾರ !

ರಾಜ್ಯ ಸರ್ಕಾರವನ್ನು ಹತ್ತು ಪರ್ಸೆಂಟ್ ಕಮೀಷನ್ ಸರ್ಕಾರ ಎಂದು ಬಣ್ಣಿಸಿದ ಪ್ರಧಾನಿ ಅವರನ್ನು ಭಾರತೀಯ ಜನತಾ ಪಕ್ಷದ ಅಧಿಕಾರವಧಿಯಲ್ಲಿ ಎಲ್ಲಾ ಯೋಜನೆಗಳಲ್ಲಿ ಏನೇನು ನಡೆದಿತ್ತು ? ಎಂಬುದನ್ನು ತಮ್ಮ ಪಕ್ಕದಲ್ಲೇ ಕುಳಿತಿದ್ದ ಯಡಿಯೂರಪ್ಪ ಅವರನ್ನು ಪ್ರಧಾನಿ ಕೇಳಿ ತಿಳಿದುಕೊಳ್ಳಬೇಕಿತ್ತು ಎಂದು ಅವರು ವ್ಯಂಗ್ಯವಾಡಿದ್ದಾರೆ.

ರಾಜ್ಯದಲ್ಲಿದ್ದ ಭಾರತೀಯ ಜನತಾ ಪಕ್ಷದ ಸರ್ಕಾರವು ಲೂಟಿ ಕೋರರ ಸರ್ಕಾರವಾಗಿತ್ತು. ಆರೋಪಕ್ಕೆ ಪ್ರತ್ಯಾರೋಪವಾಗಿ ಈ ಮಾತನ್ನು ಹೇಳುತ್ತಿಲ್ಲ. ರಾಜ್ಯದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಪ್ರಕರಣ ಇದನ್ನು ಸಾಬೀತುಪಡಿಸುತ್ತದೆ. ಚೆಕ್ ಮೂಲಕ ಲಂಚ ಪಡೆದ ನಿದರ್ಶನ ಬೇರೆಲ್ಲೂ ಇಲ್ಲ, ಇವೆಲ್ಲವೂ ಲೋಕಾಯುಕ್ತ ವರದಿಯಲ್ಲಿಯೇ ದಾಖಲಾಗಿದೆ ಎಂದು ಅವರು ಹೇಳಿದರು.

**ಲೋಕಾಯುಕ್ತವೂ ಇಲ್ಲ ! ಲೋಕಪಾಲವೂ ಇಲ್ಲ !!**

ನರೇಂದ್ರ ಮೋದಿ ಅವರು ಮುಖ್ಯಮಂತ್ರಿಯಾಗಿದ್ದಾಗ ಒಂಭತ್ತು ವರ್ಷಗಳ ಕಾಲ ಗುಜರಾತ್‌ನಲ್ಲಿ ಲೋಕಾಯುಕ್ತ ನೇಮಕ ಮಾಡಲಿಲ್ಲ. ಇದೀಗ ನಾಲ್ಕು ವರ್ಷಗಳು ಉರುಳಿದರೂ ಕೂಡಾ ರಾಷ್ಟ್ರದಲ್ಲಿ ಲೋಕಪಾಲ್ ನೇಮಕ ಮಾಡಲಿಲ್ಲ. ಇಂತಹವರು ಭ್ರಷ್ಟಾಚಾರ ವಿರುದ್ಧ ಭಾಷಣ ಬಿಗಿಯುತ್ತಾರೆ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಇವರಿಗೆ ಯಾವ ನೈತಿಕತೆ ಇದೆ ? ಎಂದ ಸಿದ್ದರಾಮಯ್ಯ ಅವರು ಉನ್ನತ ಹುದ್ದೆಯಲ್ಲಿರುವವರು ರಾಜಕೀಯ ಪ್ರೇರಿತ ಭಾಷಣ ಮಾಡಿ ಜನರನ್ನು ತಪ್ಪು ದಾರಿಗೆ ಎಳೆಯುವುದು ನಾಚಿಕೆಗೇಡಿನ ಪ್ರಸಂಗ ಎಂದು ಬಣ್ಣಿಸಿದರು.

**ಕೈಬಿಟ್ಟ ಯೋಜನೆಗೂ ಭ್ರಷ್ಟಾಚಾರ ಆರೋಪ ಹೊರಿಸಿ ನಗೆಪಾಟಲು**

ಉಕ್ಕಿನ ಸೇತುವೆ ಯೋಜನೆ ಭಾರತೀಯ ಜನತಾ ಪಕ್ಷದ ಸರ್ಕಾರದ ಪರಿಕಲ್ಪನೆ. ಸಾರ್ವಜನಿಕರೂ ಹಾಗೂ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಉಕ್ಕಿನ ಸೇತುವೆ ಯೋಜನೆಯನ್ನು ತಮ್ಮ ಸರ್ಕಾರ ಕೈಬಿಟ್ಟಿದೆ. ಆದರೆ ಈ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಪ್ರಧಾನಿ ನಗೆಪಾಟಲಿಗೀಡಾಗಿದ್ದಾರೆ.

**ನಾವು ಮೊದಲು !**

ಇಡೀ ರಾಷ್ಟ್ರದಲ್ಲಿಯೇ ಕರ್ನಾಟಕ ರಾಜ್ಯವು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಮೊದಲನೇ ಸ್ಥಾನದಲ್ಲಿದೆ. ರೇಷ್ಮೆ ಉತ್ಪಾದನೆಯಲ್ಲೂ ಮೊದಲನೇ ಸ್ಥಾನದಲ್ಲಿದೆ. ತಮ್ಮ ಸರ್ಕಾರವು ಅಧಿಕಾರಕ್ಕೆ ಬಂದಾಗ ಬಂಡವಾಳ ಹೂಡಿಕೆಯಲ್ಲಿ ಹನ್ನೊಂದನೇ ಸ್ಥಾನದಲ್ಲಿದ್ದ ಕರ್ನಾಟಕ ರಾಜ್ಯ ಇದೀಗ 2016 ಮತ್ತು 2017 ನೇ ಸಾಲಿನಲ್ಲಿ ಮೊದಲನೇ ಸ್ಥಾನದಲ್ಲಿದೆ ಎಂಬುದನ್ನು ಕೇಂದ್ರ ಸರ್ಕಾರವೇ ಹೇಳಿದೆ. ಈ ದೇಶದಲ್ಲಿ ಬಹು ವಲಯ ನವೋಧ್ಯಮ ನೀತಿ ( ಮಲ್ಟಿ ಸೆಕ್ಟೋರಲ್ ಸ್ಟಾರ್ಟ್ ಅಪ್ ಪಾಲಿಸಿ ) ಜಾರಿಗೊಳಿಸಿದ ಮೊದಲನೆಯ ರಾಜ್ಯ ನಮ್ಮ ಕರ್ನಾಟಕ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಗಣಕೀಕೃತಗೊಳಿಸಿ ಆನ್ ಮಾರುಕಟ್ಟೆ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತಂದ ಮೊದಲ ರಾಜ್ಯ ಕರ್ನಾಟಕ. ನಮ್ಮ ಸರ್ಕಾರದ ಈ ಕ್ರಮದಿಂದ ರೈತರ ಆದಾಯದಲ್ಲಿ ಶೇಕಡಾ 38 ರಷ್ಟು ಹೆಚ್ಚಳವಾಗಿದೆ ಎಂಬುದನ್ನು ನೀತಿ ಆಯೋಗವೇ ತಿಳಿಸಿದೆ.

ಎಲೆಕ್ಟ್ರಿಕ್ ವೆಹಿಕಲ್ ಎನರ್ಜಿ ಸ್ಟೋರೇಜ್ ಪಾಲಿಸಿ ಹಾಗೂ ಯೂನಿವರ್ಸಲ್ ಹೆಲ್ತ್ ಸ್ಕೀಮ್ ಜಾರಿಗೆ ತಂದ ಮೊದಲ ರಾಜ್ಯ ನಮ್ಮ ಕರ್ನಾಟಕ. ನವೋಧ್ಯಮ ಮತ್ತು ಅನ್ವೇಷಣಾ ನೀತಿ ಜಾರಿಗೆ ತಂದ ಮೊದಲ ರಾಜ್ಯವೂ ನಮ್ಮ ಕರ್ನಾಟಕವೇ.

ಇಡೀ ದೇಶದಲ್ಲಿಯೇ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚತುರ ಸಾರಿಗೆ ವ್ಯವಸ್ಥೆ ( ಇಂಟಲಿಜೆಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್ ) ಅನುಷ್ಠಾನಗೊಳಿಸಿದ ಕೀರ್ತಿ–ಗೌರವಗಳೂ ನಮಗೇ ಸಲ್ಲಬೇಕು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನಮ್ಮ ಅಧಿಕಾರಾವಧಿಯಲ್ಲಿಯೇ 207 ಪ್ರಶಸ್ತಿಗಳು ಬಂದಿವೆ. ಕೇವಲ ಭಾರತದಲ್ಲಿ ಮಾತ್ರವಲ್ಲ, ಇಡೀ ಏಷ್ಯಾಖಂಡದಲ್ಲಿಯೇ ಅತೀ ದೊಡ್ಡ ಸೌರ ಉದ್ಯಾನ ಸ್ಥಾಪನೆಯಾಗಿರುವುದು ನಮ್ಮ ಕರ್ನಾಟಕದಲ್ಲೇ. ಗ್ರಾಮೀಣ ಪ್ರದೇಶದಲ್ಲಿ ವಿದ್ಯುದ್ದೀಕರಣದ ಪ್ರಮಾಣ ದೇಶದ ಸರಾಸರಿ ಶೇಕಡಾ 88 ರಷ್ಟಿದೆ. ರಾಜ್ಯದಲ್ಲಿ ಇದರ ಪ್ರಮಾಣ ಶೇಕಡಾ 98 ತಲುಪಿದೆ.

ಬರಗಾಲದ ಸಂದರ್ಭದಲ್ಲಿ ಪರಿಹಾರ ಮೊತ್ತವನ್ನು ರೈತರ ಖಾತೆಗಳಿಗೆ ನೇರವಾಗಿ ವಗಾವಣೆ ಮಾಡಿದ ಕೀರ್ತಿ ನಮ್ಮ ಸರ್ಕಾರದ್ದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲೂ ಕರ್ನಾಟಕ ಮುಂಚೂಣಿಯಲ್ಲಿದೆ. ರಾಜ್ಯದ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಕೂಡಾ ಕೇಂದ್ರ ಸರ್ಕಾರದ ಮೆಚ್ಚುಗೆಗೆ ಪಾತ್ರವಾಗಿದೆ. ರಾಜ್ಯದಲ್ಲಿ ಪಂಚಾಯತ್ ರಾಜ್ ಸೇವಾ ಚಟುವಟಿಕೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಬಳಕೆಯಲ್ಲಿ ಕರ್ನಾಟಕವನ್ನು ಅತ್ಯುನ್ನತ ಕಾರ್ಯ ನಿರ್ವಹಣಾ ರಾಜ್ಯ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವೇ ಶ್ಲಾಘಿಸಿದೆ.

ರಾಜ್ಯದ ರೈತರಿಗೆ ಮೂರು ಲಕ್ಷವರೆಗೆ ಬಡ್ಡಿ ರಹಿತ ಸಾಲ ಸೌಲಭ್ಯ ವಿಸ್ತರಿಸಿದ್ದು ನಾವು. ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲೂ ಡಯಾಲಿಸಿಸ್ ಕೇಂದ್ರಗಳನ್ನು ತೆರೆದದ್ದು ನಾವು. ಕೃಷಿಭಾಗ್ಯ ಯೋಜನೆಯನ್ನು ಅನುಷ್ಠಾನ ಮಾಡಿದವರು ನಾವು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಗುತ್ತಿಗೆಯಲ್ಲಿ ಮೀಸಲಾತಿಗೆ ಅವಕಾಶ ಕಲ್ಪಿಸಲು ಕಾನೂನು ತಂದದ್ದು ನಾವು. ಲಂಬಾಣಿ ತಾಂಡಗಳು, ಹಾಡಿ, ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಕಾನೂನು ರೂಪಿಸಿದ್ದು ನಾವು. ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಹಾಗೂ ಗಿರಿಜನ ಉಪ ಯೋಜನೆಯಲ್ಲಿ ಪರಿಶಿಷ್ಟ ಪಂಗಡದವರಿಗೆ ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಹಂಚಿಕೆ ಮಾಡಿ ಸೌಲಭ್ಯ ವಂಚಿತ ಈ ಸಮುದಾಯಗಳ ಶ್ರೇಯೋಭಿವೃದ್ಧಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಕಾನೂನು ತಂದ ರಾಷ್ಟ್ರದ ಎರಡನೇ ರಾಜ್ಯ ನಮ್ಮ ಕರ್ನಾಟಕ. ಇವೆಲ್ಲವೂ ನಮ್ಮ ಅಧಿಕಾರಾವಧಿಯಲ್ಲೇ ಆದದ್ದು.

## ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸರಿ ಇಲ್ಲದಿದ್ದಲ್ಲಿ ಬಂಡವಾಳ ಹೂಡಿಕೆಯಾಗುತ್ತಿತ್ತೇ ?

ನ್ಯಾಷನಲ್ ಕ್ರೈಮ್ ರೆಕಾರ್ಡ್ ಬ್ಯೂರೊದ ಅಂಕಿ–ಅಂಶಗಳಂತೆ ರಾಷ್ಟ್ರದಲ್ಲಿ ಅತಿ ಹೆಚ್ಚು ಅಪರಾಧಗಳು ಅಂದರೆ ಶೇಕಡಾ 11.5 ರಷ್ಟು ದಾಖಲಾಗಿರುವುದು ಉತ್ತರ ಪ್ರದೇಶದಲ್ಲಿ ನಂತರದ ಸ್ಥಾನ ಮಧ್ಯಪ್ರದೇಶ.

ಈ ಎರಡೂ ರಾಜ್ಯಗಳಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರಗಳೇ ಇವೆ. ಬಿಹಾರದಲ್ಲಿರುವ ಸಮ್ಮಿಶ್ರ ಸರ್ಕಾರದಲ್ಲಿ ಕೂಡಾ ಇವರೂ ಪಾಲುದಾರರು. ರಾಜಸ್ಥಾನ, ಮಹಾರಾಷ್ಟ್ರ, ಗುಜರಾತ್ ಮತ್ತು ಹರಿಯಾಣ ರಾಜ್ಯಗಳಲ್ಲೂ ಇವರದ್ದೇ ಸರ್ಕಾರಗಳಿವೆ. ಇವೆಲ್ಲಕ್ಕಿಂತಲೂ ಕರ್ನಾಟಕದಲ್ಲಿ ಅಪರಾಧ ಪ್ರಮಾಣ ಕಡಿಮೆಯೇ ಇದೆ.

ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷದ ಅಧಿಕಾರದ ಅವಧಿಯಲ್ಲಿ ಅಪರಾಧದ ಪ್ರಮಾಣ ಶೇಕಡಾ 6.7 ರಷ್ಟಿತ್ತು. ನಮ್ಮ ಅಧಿಕಾರಾವಧಿಯಲ್ಲಿ ಈ ಪ್ರಮಾಣವನ್ನು ನಾವು ಶೇಕಡಾ 5 ಕ್ಕೆ ಇಳಿಸಿದ್ದೇವೆ. ಹೀಗಿದ್ದರೂ ಕೂಡ ಕರ್ನಾಟಕದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದು ದೇಶದ ಪ್ರಧಾನಿಯವರೇ ಅಪ ಪ್ರಚಾರ ಮಾಡುವುದು ಎಷ್ಟು ಸರಿ ?

ಕೇಂದ್ರ ಸರ್ಕಾರದ ಅಂಕಿ ಅಂಶಗಳೇ ತಿಳಿಸುವಂತೆ 2016 ಹಾಗೂ 2017 ನೇ ಸಾಲಿನಲ್ಲಿ ಇಡೀ ದೇಶದಲ್ಲಿಯೇ ಕರ್ನಾಟಕದಲ್ಲಿ ಅತಿ ಹೆಚ್ಚು ಬಂಡವಾಳ ಹೂಡಿಕೆಯಾಗಿದೆ. ಕಾನೂನು ಮತ್ತು ಸುವ್ಯವಸ್ಥೆ ಸರಿ ಇಲ್ಲದಿದ್ದಲ್ಲಿ, ಇಡೀ ರಾಷ್ಟ್ರದಲ್ಲಿಯೇ ನಮ್ಮ ರಾಜ್ಯದಲ್ಲಿಯೇ ಅತೀ ಹೆಚ್ಚು ಬಂಡವಾಳ ಹೂಡಿಕೆಯಾಗುತ್ತಿತ್ತೇ ? ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು.

ಏಷ್ಯಾ ಪೆಸಿಫಿಕ್ ಪ್ರವಾಸೋದ್ಯಮ ಸಮಾವೇಶ ಹಾಗೂ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶದ ಸಂದರ್ಭದಲ್ಲಿ ಕೈಗಾರಿಕಾ ಸ್ನೇಹಿ ರಾಜ್ಯ ಎಂದು ಎಲ್ಲೆಡೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿರುವ ನಮ್ಮ ಕರ್ನಾಟಕವನ್ನು ಚುನಾವಣಾ ದೃಷ್ಟಿಯಲ್ಲಿಸಿಕೊಂಡು ಲೂಟಿಕೋರರಿಗೆ ರಕ್ಷಣೆ ಕೊಟ್ಟವರು, ಭ್ರಷ್ಟಾಚಾರ ಆರೋಪ ಹೊತ್ತು ಜೈಲು ಹೊಕ್ಕು ಹೊರಬಂದವರು, ಕೊಲೆ ಆರೋಪ ಹೊತ್ತು ಗಡಿಪಾರಾದವರನ್ನು ಜೊತೆಗೆ ಇರಿಸಿಕೊಂಡು ಕರ್ನಾಟಕಕ್ಕೆ ಕಳಂಕ ತರುವ ಮಾತುಗಳನ್ನು ಆಡುವುದು ಪ್ರಧಾನಿ ಹುದ್ದೆಗೆ ಶೋಭೆ ತರುವುದಿಲ್ಲ. ಇದು ರಾಜ್ಯಕ್ಕೂ ಗೌರವ ತರುವುದಿಲ್ಲ. ಇಂತಹವರಿಂದ ನಾವು ಪಾಠ ಕಲಿಯುವ ಅಗತ್ಯವಿಲ್ಲ ಎಂದು ಸಿದ್ದರಾಮಯ್ಯ ಅವರು ಎಚ್ಚರಿಸಿದರು.

### ಹುಸಿಯಾದ ನೀರೀಕ್ಷೆ

ಪ್ರಧಾನ ಮಂತ್ರಿಯವರ ಆಗಮನದ ಸಂದರ್ಭದಲ್ಲಿ ರಾಜ್ಯದ ಜನರು ಬಹು ನಿರೀಕ್ಷೆ ಹೊತ್ತು ಪ್ರಧಾನಿ ಭಾಷಣವನ್ನು ಆಲಿಸುತ್ತಿದ್ದರು. ರಾಷ್ಟ್ರೀಯ ಬ್ಯಾಂಕ್ ಮತ್ತು ಷೆಡ್ಯೂಲ್ ಬ್ಯಾಂಕ್‌ಗಳಲ್ಲಿ ರಾಜ್ಯದ ರೈತರು ಪಡೆದ 42,000 ಕೋಟಿ ರೂ. ಸಾಲ ಮನ್ನಾ ಕುರಿತ ಘೋಷಣೆ ಮಾಡುತ್ತಾರೆ ಎಂದು ನಿರೀಕ್ಷಿದ್ದರು. ಉದ್ಯಮಿಗಳು ಪಡೆದ 6 ಲಕ್ಷ ರೂ. ಸಾಲವನ್ನು ಅನುತ್ಪಾದನಾ ಆಸ್ತಿ ( ನಾನ್ ಪರ್ಫಾಮಿಂಗ್ ಅಸೆಟ್ ) ಎಂದು ಬಣ್ಣಿಸಿ ಸಾಲ ಮನ್ನಾ ಮಾಡಿದ ಈ ಜನ ರೈತರ ಬೆಳೆ ಸಾಲ ಮನ್ನಾ ಮಾಡಲಿಲ್ಲ. ಇದರಿಂದ ರೈತರ ನಿರೀಕ್ಷೆ ಹುಸಿಯಾಗಿದೆ. ರಾಜ್ಯದ ರೈತರು ನಿರಾಶರಾಗಿದ್ದಾರೆ.

**ಆಸೆ–ನಿರಾಸೆ**

ಕರ್ನಾಟಕದಲ್ಲಿ 45 ಟಿ. ಎಂ. ಸಿ. ನೀರು ಉತ್ಪತ್ತಿ ಆದರೂ 7.56 ಟಿ. ಎಂ.ಸಿ. ಕುಡಿಯುವ ನೀರಿಗಾಗಿ ಕಳೆದ ಎರಡೂವರೆ ವರ್ಷಗಳಿಂದ ಹೋರಾಟ ನಡೆಸುತ್ತಿರುವ ರೈತರು ಮಹದಾಯಿ ನದಿ ನೀರು ಹಂಚಿಕೆ ವಿವಾದ ಬಗೆಹರಿಸಲು ಪ್ರಧಾನಿ ಮಧ್ಯಸ್ಥಿಕೆ ವಹಿಸುತ್ತಾರೆ ಎಂಬ ಆಶಾಭಾವನೆ ಹೊಂದಿದ್ದರು. ಆದರೆ ಅದೂ ಕೂಡಾ ನಿರಾಸೆಯಾಗಿದೆ ಎಂದು ಮುಖ್ಯಮಂತ್ರಿ ವ್ಯಾಖ್ಯಾನಿಸಿದರು.

**ತೆರಿಗೆ ಮತ್ತು ಅನುದಾನ : ಅರ್ಥ–ವ್ಯತ್ಯಾಸಗಳು**

ತೆರಿಗೆ ಮತ್ತು ಅನುದಾನದ ಅರ್ಥ ವ್ಯತ್ಯಾಸಗಳ ಅರಿವು ಇಲ್ಲದಂತೆ ಭಾರತೀಯ ಜನತಾ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಆದಾಯ ತೆರಿಗೆ, ಸೇವಾ ತೆರಿಗೆ, ಕಾರ್ಪೋರೇಟ್ ತೆರಿಗೆ ಮತ್ತು ಅಬಕಾರಿ ಸುಂಕಗಳು ಎಲ್ಲವೂ ಕೇಂದ್ರ ಸರ್ಕಾರಕ್ಕೆ ರಾಜ್ಯಗಳಿಂದಲೇ ಸಂಗ್ರಹಣೆಯಾಗುತ್ತವೆ. ಸಂಗ್ರಹಣೆಯಾದ ಈ ತೆರಿಗೆಗಳಲ್ಲಿ ಪಾಲು ಪಡೆಯಲು ರಾಜ್ಯಗಳಿಗೆ ನ್ಯಾಯಬದ್ಧ ಹಕ್ಕಿರುತ್ತದೆ.

ಇಡೀ ದೇಶದಲ್ಲಿಯೇ ತೆರಿಗೆ ಸಂಗ್ರಹಣೆಯಲ್ಲಿ ಶೇಕಡಾ 9.47 ರಷ್ಟು ಸಾಧನೆ ಮಾಡಿ ಮೂರನೇ ಸ್ಥಾನದಲ್ಲಿರುವ ಕರ್ನಾಟಕಕ್ಕೆ ಕೇಂದ್ರದಿಂದ ದೊರೆಯುತ್ತಿರುವ ತೆರಿಗೆಯ ಪಾಲು ಶೇಕಡಾ 4.65 ಮಾತ್ರ. ಹದಿನಾಲ್ಕನೇ ಹಣಕಾಸು ಆಯೋಗದ ಮುನ್ಸೂಚನೆಯಂತೆ 2015–16, 2016–17 ಹಾಗೂ 2017–18 ರ ಮೂರು ವರ್ಷಗಳಲ್ಲಿ ರಾಜ್ಯಕ್ಕೆ 95,200 ಕೋಟಿ ರೂ. ಬರಬೇಕಿದೆ. ಆದರೆ, ವಾಸ್ತವವಾಗಿ ರಾಜ್ಯಕ್ಕೆ ಬಂದದ್ದು 84,500 ಕೋಟಿ ರೂ. ಮಾತ್ರ. ರಾಜ್ಯಕ್ಕೆ ಬರಬೇಕಾದ ಮೊತ್ತದಲ್ಲಿ 10,700 ಕೋಟಿ ರೂ ಕೊರತೆ ಇದೆ.

ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಒದಗಿಸುತ್ತಿರುವ ಅನುದಾನದ ಪ್ರಮಾಣವನ್ನು ಗಣನೀಯವಾಗಿ ಕಡಿತಗೊಳಿಸಲಾಗಿದೆ. ರಾಜಸ್ಥಾನದ ನಂತರ ಭೀಕರ ಬರಗಾಲ ಎದುರಿಸದ ರಾಜ್ಯ ಕರ್ನಾಟಕವಾದರೂ ಗುಜರಾತ್, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರಗಳಿಗೆ ಅಧಿಕ ಪರಿಹಾರ ಒದಗಿಸಿರುವ ಕೇಂದ್ರ ಸರ್ಕಾರ ನಮ್ಮ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ತೋರಿದೆ ಎಂದು ಸಿದ್ದರಾಮಯ್ಯ ಅವರು ವಿವರಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹೆಚ್. ಕೆ. ಪಾಟೀಲ್, ಗೃಹ ಸಚಿವ ರಾಮಲಿಂಗಾರೆಡ್ಡಿ, ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವ ಕೆ. ಜೆ. ಜಾರ್ಜ್, ಲೋಕೋಪಯೋಗಿ ಸಚಿವ ಡಾ ಹೆಚ್. ಸಿ. ಮಹದೇವಪ್ಪ, ಇಂಧನ ಸಚಿವ ಡಿ. ಕೆ. ಶಿವಕುಮಾರ್, ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ. ಬಿ. ಜಯಚಂದ್ರ, ನಗರಾಭಿವೃದ್ಧಿ ಮತ್ತು ಹಜ್ ಸಚಿವ ಆರ್. ರೋಷನ್ ಬೇಗ್, ಆಹಾರ ಮತ್ತು ನಾಗರೀಕ ಸರಬರಾಜು ಸಚಿವ

ಯು. ಟಿ. ಖಾದರ್, ಸಾರಿಗೆ ಸಚಿವ ಹೆಚ್. ಎಂ. ರೇವಣ್ಣ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎಲ್. ಕೆ. ಅತೀಕ್ ಅವರೂ ಮುಖ್ಯಮಂತ್ರಿಯವರ ಈ ಪತ್ರಿಕಾ ಗೋಷ್ಠಿಯಲ್ಲಿ ಹಾಜರಿದ್ದರು.

**********

ಡಿ ಪಿ ಎಂ